ತಿನ್ನಲು ಮನಸ್ಸಾಗಲಿಲ್ಲ.

ಅವಳು ಅಪೇಕ್ಷಿಸಿದ ಊರಿಗೆ ವರ್ಗಾವಣೆ ಮಾಡುವುದು ಕಷ್ಟದ ವಿಷಯವೇ ಆಗಿರಲಿಲ್ಲ. ದೈಹಿಕ ನ್ಯೂನತೆ ಇರುವವರು ಬಯಸಿದ ಜಾಗಕ್ಕೆ ಟ್ರಾನ್ಸ್‌ಫರ್ ಮಾಡುವ ನಿಯಮವೇ ಇದೆ. ಬೆಂಗಳೂರು ಹಲವು ಆಮಿಷಗಳನ್ನು ಒಡ್ಡಿ ಮೈ ಮರೆಸುವ ಮಾಯಾ ನಗರಿ; ಕೆಲವರ ಬದುಕನ್ನು ಬೆಳಗಿಸಿ, ಹಲವರ ಬದುಕನ್ನು ಕತ್ತಲ ಕೂಪಕ್ಕೆ ತಳ್ಳುತ್ತದೆ. ಚೈತ್ರ ಹೊಸ ಬೆಳಕನ್ನು ಕಾಣಬೇಕೆಂದು ಆಸೆ ಪಟ್ಟು ಬೆಂಗಳೂರಿಗೆ ಬಂದಳು. ಅವಳು ಬಯಸಿದ್ದು ಆಗಲಿಲ್ಲ; ಬದಲು ಮತ್ತಷ್ಟು ನೋವು, ಕಹಿ ಉಂಡಳು. ಅವಳಿಗೆ ಸಾಂತ್ವನ ಹೇಳಿ, ಇಲ್ಲೇ ಇದ್ದು ಎಲ್ಲವನ್ನೂ ಎದುರಿಸು ಎಂದು ಉಪದೇಶಿಸುವುದರಲ್ಲಿ ಅರ್ಥ ಇರಲಿಲ್ಲ. ತನ್ನೂರಲ್ಲಿ ನೆಮ್ಮದಿ ಕಂಡುಕೊಳ್ಳುವುದಾದರೆ ಒಳ್ಳೆಯದೇ ಅನ್ನಿಸಿತು.

ಬಹಳ ದಿನಗಳಿಂದ ನನ್ನನ್ನು ಕಾಡುತ್ತಿದ್ದ ಪ್ರಶ್ನೆಯೊಂದಿತ್ತು. ಚೈತ್ರಾ ಕೃತ್ಯಕ್ಕೆ ಕಾರಣನಾದವನ ಹೆಸರು ಮುಚ್ಚಿಡುವುದು ಯಾಕೆ? ಇದರಿಂದ ನಾನು ಅನವಶ್ಯ ಅನುಮಾನಗಳಿಗೆ, ನಿಂದನೆಗೆ ಗುರಿಯಾದೆ. ಅವಳನ್ನು ಮತ್ತೆ, ಮತ್ತೆ ಪ್ರಶ್ನಿಸಿ ನೋವುಂಟು ಮಾಡುವುದು ಸರಿ ಎನ್ನಿಸಿರಲಿಲ್ಲ. ಈಗ ತಿಳಿದುಕೊಳ್ಳದಿದ್ದರೆ ಮತ್ತೆಂದೂ ತಿಳಿಯಲು ಸಾಧ್ಯವೂ ಇಲ್ಲ. ಇದು ಕೆಟ್ಟ ಕುತೂಹಲ, ನನ್ನೊಳಗಿನ ಈರ್ಷ್ಯೆ ಎನ್ನಿಸಬಹುದಾದರೂ ಹೊರಡುವ ಮುಂಚೆ ಕೇಳಿಯೇ ಬಿಡೋಣ ಎಂದೆನ್ನಿಸಿತು.

'ನಾನೂ ಸುಜಾತಾ ಎಷ್ಟು ಸಲ ಕೇಳಿದರೂ ಆತ ಯಾರೆಂದು ನೀನು ಹೇಳಲಿಲ್ಲ. ಯಾರಾದರೂ ನಂಬಿಸಿ ಮೋಸ ಮಾಡಿದರೇ ಅಥವಾ ಫೋರ್ಸ್ ಮಾಡಿದರೆ? ನನ್ನ ಸಮಾಧಾನಕ್ಕಾಗಿ ಕೇಳುತ್ತಿದ್ದೇನೆ... ಸಾಧ್ಯವಾದರೆ ಹೇಳು, ಒತ್ತಾಯ ಇಲ್ಲ' ಎಂದೆ.

ಚೈತ್ರಾ ಕಾಫಿ ಕಪ್ಪನ್ನು ಮುಂದಕ್ಕೆ ತಳ್ಳಿ ಅರೆಗಳಿಗೆ ಯೋಚಿಸಿದಳು.

'ಹಿ ಈಸ್ ಬ್ಲೈಂಡ್'

ಅವಳು ಹೇಳಿದ್ದನ್ನು ಕೇಳಿ ಬಾಯಿ ಕಟ್ಟಿತು. ಕೊನೆಯದಾಗಿ, ಹೊರಡುವ ಸಮಯದಲ್ಲಿ ಕೇಳಿದೆ 'ನಿನ್ನ ಆಂಬಿಷನ್ಸ್ ಏನಾಯಿತು?'

'ಅಲ್ಲೇ ಪ್ರಯತ್ನಿಸುತ್ತೇನೆ' ದನಿಯಲ್ಲಿ ವಿಶ್ವಾಸವಿತ್ತು.

ನಿಧಾನವಾಗಿ ಹೆಜ್ಜೆ ಹಾಕುತ್ತಾ ರೆಸ್ಟೋರೆಂಟಿನಿಂದ ಹೊರಟೆವು. ರಸ್ತೆಯ ತಿರುವಿನಲ್ಲಿ ಬೈ ಹೇಳಿದಳು. ಬಿಳಿಕೋಲು ಮರೆಯಾಗುವವರೆಗೆ ನಾನು ನೋಡುತ್ತಾ ನಿಂತಿದ್ದೆ.

* * *

ಚೈತ್ರಾ ಬೆಂಗಳೂರು ಬಿಟ್ಟು ಕೆಲವು ವರ್ಷಗಳಾಗಿದ್ದವು. ದಿನಗಳೆದಂತೆ ನೆನಪುಗಳು ಮಾಸುತ್ತವೆ. ನಾನು ಚೈತ್ರಾಳನ್ನು ಸಂಪರ್ಕಿಸಲು ಪ್ರಯತ್ನಿಸಿರಲಿಲ್ಲ. ಆಕೆಯೂ ಕಹಿ ನೆನಪುಗಳನ್ನು ಮರೆಯಲು ಬಯಸಿರಬಹುದು. ಆದರೆ, ನನಗೆ ಬಿಳಿಕೋಲು ಕಂಡಾಗಲೆಲ್ಲ ಆಕೆ ನೆನಪಾಗುತ್ತಿದ್ದಳು; ತನ್ನ ಆಕಾಂಕ್ಷೆಗಳನ್ನು ಪೂರೈಸಿಕೊಂಡಳೇ, ಅವಳು ಬಯಸಿದ ನೆಮ್ಮದಿ ದೊರಕಿತೇ ಎಂದೆಲ್ಲಾ ಯೋಚಿಸುತ್ತಿದ್ದೆ.

ಆ ದಿನ ಸಂಜೆ ಬೈಕಲ್ಲಿ ಆಫೀಸಿನಿಂದ ಮನೆಗೆ ಬರುತ್ತಿದ್ದೆ. ಬಿಇಎಲ್ ಸರ್ಕಲ್‌ನಲ್ಲಿ ಟ್ರಾಫಿಕ್ ಜಾಮ್ ಆಗಿತ್ತು. ವಾಹನಗಳು ಬಸವನಹುಳುವಿನಂತೆ ತೆವಳುತ್ತಿದ್ದವು. ಏಳು ರಸ್ತೆಗಳು ಸೇರುವ ಆ ಸರ್ಕಲ್‌ನಲ್ಲಿ ಲೈಂಗಿಕ ಅಲ್ಪಸಂಖ್ಯಾತರು ಇದ್ದೇ ಇರುತ್ತಾರೆ. ದಿನಾಲೂ ಕಾಣುವ ಮುಖಗಳೇ. ಅವರ ಜೊತೆಯಲ್ಲೇ ಎಂದೂ ಇಲ್ಲದ ಬಿಳಿ ಕೋಲುಗಳು ಕಂಡವು. ಭಿಕ್ಷುಕರ ನಡುವೆ ಬಿಳಿಕೋಲುಗಳು ಎಲ್ಲಿಂದ ಬಂತು ಎಂದು ಅಚ್ಚರಿಯಾಗಿ ಬೈಕನ್ನು ಹತ್ತಿರ ಸರಿಸಿದೆ.

ಒಬ್ಬರ ಹಿಂದೆ ಒಬ್ಬರಂತೆ ನಾಲ್ಕು ಜನ! ಮಧ್ಯ ವಯಸ್ಸಿನ ತಂದೆ- ತಾಯನ್ನು ಹಿಂಬಾಲಿಸುತ್ತಿದ್ದ ಹದಿವಯಸ್ಸಿನ ಇಬ್ಬರು ಮಕ್ಕಳು. ಎಲ್ಲರ ಕೈಯಲ್ಲು ಬಿಳಿಕೋಲುಗಳು! ತಂದೆ ಕೋಲು ಆಡಿಸುತ್ತಾ ಮುಂದೆ ಸಾಗುತ್ತಿದ್ದರೆ, ಅವನ ಹಿಂದೆ ತಟ್ಟೆ ಹಿಡಿದು ಹಿಂಬಾಲಿಸುತ್ತಿದ್ದ ತಾಯಿ. ಕೊನೆಯಲ್ಲಿದ್ದ ಮಗನ ಕೈಯಲ್ಲೂ ತಟ್ಟೆ ಇತ್ತು. ವಾಹನಗಳ ಮಧ್ಯೆ ದಾರಿ ಮಾಡಿಕೊಂಡು ನಿಂತು,ನಿಂತು ಸಾಗುತ್ತಿದ್ದರು.

ಚೈತ್ರಾ ಆಗಾಗ್ಗೆ ಹೇಳುತ್ತಿದ್ದ ಹೆಲನ್ ಕೆಲ್ಲರ್‌ಳ ಮಾತುಗಳು ಆ ಕ್ಷಣದಲ್ಲಿ ನೆನಪಿಗೆ ಬಂತು. ಆದರೆ, ಹೀಗೆ ಹೇಳುತ್ತಲೇ ಚೈತ್ರಾತನಗೂ ಅಂಧ ಮಗು ಹುಟ್ಟಬಹುದೆಂದು ಹೆದರಿಬಿಟ್ಟಳೇ ಎಂದು ಸಂಶಯ ನುಸುಳಿ ಮನಸ್ಸಿಗೆ ವ್ಯಥೆಯೆನಿಸಿತು. ●